1.10 ಪಿಎಂ

† **ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)** : ಮಾನ್ಯ ಅಧ್ಯಕ್ಷರೇ, ನಾನು ಒಂದೇ ಒಂದು ನಿಮಿಷದಲ್ಲಿ ಹೇಳುತ್ತೇನೆ, ತಾವು ತೀರ್ಮ ಕೊಡುವ ಮುಂಚೆ ನಾನೇನು ತಮಗೆ ಹೇಳಬಯಸುತ್ತೇನೆಂದರೆ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಎಂದು ಏನಿದೆ ಇದೊಂದು ಸಂಸ್ಥೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಬುದು ಒಂದು ಸಂಸ್ಥೆ ಇದೆ. ಇದರ ಜೊತೆಗೆ ನಗರಸಭೆ. ಮಹಾನಗರಪಾಲಿಕೆ ಒಂದು ಸಂಸ್ಥೆ ಇದೆ. ಇದರ ಜೊತೆಗೆ ಖಾಸಗಿ ಸಂಸ್ಥೆಗಳು, ಖಾಸಗಿ ಬಡಾವಣೆಗಳನ್ನು ನಿರ್ಮಾಣ ಮಾಡತಕ್ಕಂಥದ್ದು, ಮತ್ತು ಸಹಕಾರ ಸಂಸ್ಥೆಗಳು, ಸಂಘಗಳು ಇವೆಲ್ಲವೂ ಇದೆ. ಹಿಂದೆ ಜಿ.ಎಸ್.ಕೆ. ರಾವ್ ಎನ್ನುವವರು ಒಂದು ವರದಿಯನ್ನು ಕೊಟ್ಟಿದ್ದಾರೆ, ತಾವು ಓದಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಭೂಗಳ್ಳರ ಬಗ್ಗೆ ಅವರುಗಳು ಸಾವಿರಾರು ಕೋಟಿ ರೂಪಾಯಿಗಳ ಹಗಲು ದರೋಡೆಯನ್ನು ಮಾಡುತ್ತಿರುವ ಬಗ್ಗೆ ಸಮಗ್ರವಾದಂಥ ಇತಿಹಾಸವನ್ನೇ ಕೊಟ್ಟಿದ್ದಾರೆ. ಈ ಕೈಗಾರಿಕಾ ಪ್ರದೇಶಾಭಿವೃದ್ಧಿ ಸಂಸ್ಥೆ ಏನಿದೆ ಇದರ ನೀತಿಯೇನು ಎಂಬ ಬಗ್ಗೆ ಮೊದಲು ಸ್ಪಷ್ಟವಾಗಬೇಕು. ಐ.ಟಿ. ಪಾರ್ಕ್‌ಗಳಿಗೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಒದಗಿಸಿಕೊಡತಕ್ಕಂಥದ್ದೇ ಅಥವಾ ಕೈಗಾರಿಕಾ ಅಭಿವೃದ್ಧಿ ಮಾಡತಕ್ಕಂಥದ್ದೇ ? ಸುಮಾರು ನಾಲ್ಕೂವರೆ ವರ್ಷಗಳ ಕಾಲದ ಹಿಂದಿನ ಸರ್ಕಾರ ಏನಿದೆ ಆ ಕಾಲದಲ್ಲಿದ್ದ ಮುಖ್ಯ ಮಂತ್ರಿಗಳನ್ನು ನಮ್ಮ ದೇಶದಲ್ಲಿಯೇ ನಂಬರ್ ಒನ್ ಮುಖ್ಯಮಂತ್ರಿ ಎಂದು ಪತ್ರಿಕೆಗಳಲ್ಲಿ ಬರೆಯಲಾಯಿತು. ಯಾವುದರಲ್ಲಿ ನಂಬರ್ ಒನ್ ಅವರು ? ಇವೊತ್ತು ಹೊರಗಡೆ ಬರುತ್ತದೆ, ನನಗನ್ನಿಸುತ್ತದೆ, ಬೆಂಗಳೂರು ಸುತ್ತಮುತ್ತ ಈ ಕೆ.ಐ.ಎ.ಡಿ.ಬಿ. ಏನಿದೆ ಇದೊಂದೇ ಸುಮಾರು ನಾಲ್ಕು ಸಾವಿರ ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಬೇರೆಯವರಿಗೆ ಐ.ಟಿ. ಪಾರ್ಕ್‌ಗೆ ಕೊಟ್ಟಿರತಕ್ಕಂಥ ಕೋಟ್ಯಾಂತರ ರೂಪಾಯಿಗಳ ಲೂಟಿಯಾಗಿದೆ. ಆದುದರಿಂದ ಇದರ ಬಗ್ಗೆ ಬಹಿರಂಗ ವಿಚಾರಣೆ ಆಗಬೇಕಾಗುತ್ತದೆ. ಹಿಂದಿನ ಸರ್ಕಾರದ ಬಗ್ಗೆ ಸಮಗ್ರವಾಗಿ ಬಹಿರಂಗ ಚರ್ಚೆ ಆಗಬೇಕಾಗುತ್ತದೆ. ಯಾರ್ಯಾರು ಇದ್ದರು ಎಂಬ ಬಗ್ಗೆ. ಅದರಲ್ಲಿ ಮುಖ್ಯಮಂತ್ರಿಗಳು ಇರಬಹುದು. ಅವರ ಅಳಿಯ ಇರಬಹುದು, ಬೇರೆಯವರು ಇರಬಹುದು, ಇದರಲ್ಲಿ ಸಮಗ್ರವಾಗಿ ನಾಲ್ಕೂವರೆ ವರ್ಷಗಳ ಕಾಲ ನಡೆದಿರತಕ್ಕಂಥ ಕೆಲಸವೇನೆಂದರೆ ಐ.ಟಿ. ಪಾರ್ಕ್‌ಗಳಿಗೆ ಕೆ.ಐ.ಎ.ಡಿ.ಬಿ. ಸಂಪೂರ್ಣವಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳತಕ್ಕಂಥದ್ದು ಮತ್ತು ಆ ಭೂಮಿಯನ್ನು ಐ.ಟಿ. ಪಾರ್ಕ್‌ಗೆ ಕೊಡತಕ್ಕಂಥದ್ದೇ ನಡೆದಿರತಕ್ಕಂಥದ್ದು ಆಗಿದೆ. ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಲೂಟಿ ನಡೆದಿದೆ. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕಾಗುತ್ತದೆ. ಬೆಂಗಳೂರು ಒಂದರಲ್ಲಿಯೇ ಎರಡೂವರೆ ಸಾವಿರ ಎಕರೆ ಪ್ರದೇಶವನ್ನು ಐ.ಟಿ. ಪಾರ್ಕ್‌ಗೆ ಕೊಟ್ಟಿರತಕ್ಕಂಥ ನಿದರ್ಶನವಿದೆ. ಇದರಲ್ಲಿ ಯಾರ್ಯಾರು ಇದ್ದಾರೆ ಎಂಬುದು ಬಯಲಾಗಲೇಬೇಕು. ಇದರ ಬಗ್ಗೆ ಸದನದಲ್ಲಿ ಚರ್ಚೆ ಒಂದೇ ಅಲ್ಲ, ಇದರ ಬಗ್ಗೆ ಸಮಗ್ರವಾಗಿ, ಸಂಪೂರ್ಣವಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ಸಮಗ್ರವಾಗಿ ತನಿಖೆಯಾಗಬೇಕಾಗುತ್ತದೆ. ಇದರ ಬಗ್ಗೆ ತಮಗೆ ಮನವರಿಕೆ ಮಾಡಲು ನಮ್ಮಲ್ಲಿ ಅನೇಕ ವಿಚಾರಗಳು ಇವೆ, ತಮಗೆ ನಾವು ತಿಳಿಸುತ್ತೇವೆ. ಆದಕಾರಣ ದಯವಿಟ್ಟು ತಾವು ನಮಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ,

ಅಧ್ಯಕ್ಷರು : ಈಗಾಗಲೇ ಈ ಬಗ್ಗೆ ಸಾಕಷ್ಟು ಸದಸ್ಯರು ಪ್ರಿಲಿಮಿನರಿ ಸಬ್‌ಮಿಶನ್‌ನ್ನು ಮಾಡಿದ್ದಾರೆ. ಆದುದರಿಂದ ಈ ಬಗ್ಗೆ ನಿಯಮ 69ರಡಿಯಲ್ಲಿ ನಾನು ತೆಗೆದುಕೊಂಡು ಚರ್ಚೆಗೆ ಒಂದು ಕಾಲಾವಕಾಶವನ್ನು ಗೊತ್ತು ಮಾಡುತ್ತೇನೆ.